**ಡಿ.ಡಬ್ಲುಃ 2**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ 25-10-2024.**

**ಮುಂದುವರಿದ ಪಾಟೀಸವಾಲುಃ ವಾದಿಗಳ ಪರ ಶ್ರೀ ಕೆ.ಆರ್.ಎನ್. ವಕೀಲರಿಂದಃ-**

ದಾನಪತ್ರವನ್ನು ನಾನು 2010 ರಲ್ಲಿ ನೋಡಿ, ಓದಿ ತಿಳಿದುಕೊಂಡಿರುತ್ತೇನೆ. ದಾನಪತ್ರ ಬರೆಯಲು ಮಾಹಿತಿಯನ್ನು ನನ್ನ ಅಜ್ಜ ಸೋಮಯ್ಯ ಈರಾ ನಾಯ್ಕು ರವರು ನೀಡಿರುತ್ತಾರೆ. ದಾನಪತ್ರ ತಯಾರಿಸಿ ಬರೆಯುವಾಗ ನಾನು ನನ್ನ ಅಜ್ಜ ಸೋಮಯ್ಯ ಈರಾ ನಾಯ್ಕ, ನನ್ನ ಅಜ್ಜನ ತಮ್ಮನ ಹೆಂಡತಿ ಹಿರಿಯಕ್ಕ ದುರ್ಗಪ್ಪ ನಾಯ್ಕ ಮತ್ತು ಅವರ ಮಕ್ಕಳು ಮಾಸ್ತಿ ವೆಂಕಟೇಶ ನಾಯ್ಕ ರವರು ಬಂದಿದ್ದರು. ದಾನಪತ್ರದಲ್ಲಿ ಪಿತ್ರಾರ್ಜಿತ ಅಥವಾ ಒಟ್ಟು ಕುಟುಂಬದ ಆಸ್ತಿಯೆಂದು ಬರೆದಿರುವುದನ್ನು ನಾನು ನೋಡಿರುವುದಿಲ್ಲ. ದಾನಪತ್ರದಲ್ಲಿ ಹೇಳಿದ ಆಸ್ತಿ ಸರ್ವೆ ನಂ. 680 ರಲ್ಲಿ ಸಂರಕ್ಷಕ ಹಕ್ಕಿನ ನಾತೆಯಿಂದ ಬಂದಿತ್ತು ಎಂದರೆ ಸರಿ. ಸದರಿ ಆಸ್ತಿಯ ಮೂಲ ಮಾಲೀಕರು ಯಾರು ಮತ್ತು ಅದರ ಗೇಣಿ ಯಾರು ನೀಡುತ್ತಿದ್ದರು ಎಂದು ನಾನು ತಿಳಿದುಕೊಂಡಿರುವುದಿಲ್ಲ. ಸದರಿ ಆಸ್ತಿಯು ಸಂರಕ್ಷಕ ಹಕ್ಕಿನ ನಾತೆಯಿಂದ ಬಂದಿತ್ತು ಎಂದು ಈ ಪ್ರಕರಣದಲ್ಲಿ ಬಂದು ಸಾಕ್ಷಿ ನುಡಿಯುವವರೆಗೆ ತಿಳಿದುಕೊಳ್ಳಲು ನನಗೆ ಯಾವುದೇ ತೊಂದರೆ ಇರಲಿಲ್ಲ. ದಾನಪತ್ರ ಮಾಡುವಾಗ ನಾನು ಯಾವುದೇ ದಾಖಲೆ ನೋಡಿರುವುದಿಲ್ಲ, ಏಕೆಂದರೆ ಆಗ ನನ್ನ ಅಜ್ಜ ಇದ್ದರು. ಅವರೇ ದಾಖಲೆಗಳನ್ನು ತೆಗೆದುಕೊಂಡು ಬಂದಿದ್ದರು. ದಾನಪತ್ರ ಮಾಡುವ ವೇಳೆಯಲ್ಲಿ ಅಂದರೆ ಸನ್ 2011 ರಲ್ಲಿ ನನ್ನ ಚಿಕ್ಕಪ್ಪ ಈಶ್ವರ ಸೋಮಯ್ಯ ನಾಯ್ಕ ರವರು ತೀರಿಕೊಂಡಿದ್ದರು. ನನ್ನ ಚಿಕ್ಕಪ್ಪ ಈಶ್ವರ ಸೋಮಯ್ಯ ನಾಯ್ಕ ರವರ ಹೆಂಡತಿ ಸುನಂದಾ ಈಶ್ವರ ನಾಯ್ಕ, ಮಗ ಹೇಮಂತ ಈಶ್ವರ ನಾಯ್ಕ ಇದ್ದರು. ಸನ್ 2011 ರಲ್ಲಿ ಹೇಮಂತ ಈಶ್ವರ ನಾಯ್ಕ ರವರು ಅಪ್ರಾಪ್ತ ವಯಸ್ಕರಾಗಿದ್ದರು ಎಂದರೆ ಸರಿ. ಸರ್ವೆ ನಂ.680 ರ ಆಸ್ತಿಯಲ್ಲಿ ಸುನಂದಾ ಈಶ್ವರ ನಾಯ್ಕ ಮತ್ತು ಹೇಮಂತ ಈಶ್ವರ ನಾಯ್ಕ ರವರಿಗೆ ಪಾಲು ಕೊಟ್ಟಿದ್ದಾರಾ ಇಲ್ಲಾವಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದು ನನ್ನ ಅಜ್ಜನಿಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ.

ನನ್ನ ತಂದೆ ಈ ಪ್ರಕರಣದಲ್ಲಿ ಏನು ಸಾಕ್ಷಿ ಹೇಳಿದ್ದಾರೆ ಎಂದು ನಾನು ಅವರ ಬಳಿ ಕೇಳಿ ತಿಳಿದುಕೊಂಡಿರುವುದಿಲ್ಲ. ನನ್ನ ಅಜ್ಜನಿಗೆ ಹುಲ್ಲಿನ ಮನೆಯಿತ್ತು. ಅದು ನನ್ನ ಅಜ್ಜ ಇರುವವರೆಗೆ ಸಾಮಾನ್ಯವಾಗಿತ್ತು. ಅವರ ಮರಣವಾದ ನಂತರ ಅದು ಹಾಳಾಗಿರುತ್ತದೆ. ದಾನಪತ್ರದಲ್ಲಿ ಬರೆದ

ಆಸ್ತಿಯನ್ನು ನಾನು 11ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇನೆ. ನನ್ನ ಹಿರಿಯಕ್ಕ ನವರು ಇದೇ ಸರ್ವೆ ನಂಬರಿನ ಆಸ್ತಿಯನ್ನು 12 ರಿಂದ 17 ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿರುತ್ತಾರೆ. ದಾನಪತ್ರ ಮಾಡಿದ ದಿನವೇ 12 ನೇ ಪ್ರತಿವಾದಿಯ ಪರ ಕ್ರಯಪತ್ರ ಮಾಡಲಾಗಿದೆ ಎಂದರೆ ಸರಿ. ಸದರಿ ದಾನಪತ್ರ ಮತ್ತು ಕ್ರಯಪತ್ರ ಮಾಡುವ ದಿನದಂದು ವಾದಿಯರಿಗೆ ಸರ್ವೆ ನಂ.680 ರಲ್ಲಿ ಪಾಲು ಕೊಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು, ಪಾಲು ಕೊಡಲಾಗಿತ್ತು, ಆದರೆ ಅವರು ಆಸ್ತಿಯನ್ನು ತಮ್ಮ ಹೆಸರಿಗೆ ಮಾಡಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಪುನಃ ಮುಂದುವರಿದು, ಸದರಿ ಆಸ್ತಿಯಲ್ಲಿ ವಾದಿಯರಿಗೆ ಪಾಲು ಕೊಟ್ಟಿರುವ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾನಪತ್ರ ಮಾಡುವಾಗ ನನ್ನ ಅಜ್ಜ ಕೃಷ್ಣ ಜೆ. ನಾಯ್ಕ ಮತ್ತು ನಾಗಪ್ಪ ನಾಯ್ಕ ಎಂಬ ಇಬ್ಬರು ಸಾಕ್ಷಿದಾರರನ್ನು ಕರೆದುಕೊಂಡು ಬಂದಿದ್ದರು. ದಾನಪತ್ರದಲ್ಲಿ ಸರ್ವೆ ನಂ.680 ರ ಆಸ್ತಿಯಲ್ಲಿ ವಾದಿಯರಿಗೆ ಪಾಲು ಕೊಟ್ಟಿರುವುದನ್ನು ಬರೆದಿರುವುದಿಲ್ಲ ಎಂದರೆ ಸರಿ. ದಾನಪತ್ರಕ್ಕೆ ವಾದಿಯರು ಸಹಿ ಮಾಡಿಲ್ಲ ಎಂದರೆ ಸರಿ.

ದಾನಪತ್ರದ ಮೇಲೆ ಬ್ಯಾಂಕಿನಿಂದ ಸಾಲ ಪಡೆಯುವಾಗ, ಸಾಲವನ್ನು 10 ವರ್ಷದ ಅವಧಿಯಲ್ಲಿ ಮರುಪಾವತಿ ಮಾಡುವುದಾಗಿ ಒಪ್ಪಿಕೊಂಡಿದ್ದೆವು. ಆದರೆ 10 ವರ್ಷದ ಒಳಗೆ ಸಾಲ ಮರುಪಾವತಿ ಆಗಲಿಲ್ಲ. ಸಾಲವನ್ನು ಸನ್ 2012–13 ನೇ ಸಾಲಿನಲ್ಲಿ ಪಡೆದುಕೊಂಡಿರಬಹುದು. ಸಾಲ ಪಡೆದು 10 ವರ್ಷಗಳಾಗಿತ್ತು. ಒಟ್ಟು ರೂ.15,00,000/– ಸಾಲ ಪಡೆಯಲಾಗಿತ್ತು. ದಾನಪತ್ರ ಮಾಡುವಾಗ ನಕ್ಷೆ ತಯಾರಿಸಲಾಗಿತ್ತು. ದಾನಪತ್ರಕ್ಕೆ ನಕ್ಷೆಯನ್ನು ಲಗತ್ತಿಸಲಾಗಿತ್ತು. ನಕ್ಷೆಯನ್ನು ದಾನಪತ್ರವಾದ ನಂತರ ನೋಡಿರುತ್ತೇನೆ. ದಾನಪತ್ರದಲ್ಲಿ ಚತುರ್ಗಡಿ ಬರೆಯಲಾಗಿದೆ. ಸಾಕ್ಷಿಗೆ ನಿಡಿ–4 ದಾನಪತ್ರವನ್ನು ತೋರಿಸಿ, ಅದರಲ್ಲಿ ಚತುರ್ಗಡಿ ಇದೆಯಾ? ಎಂದು ಕೇಳಿದ ಪ್ರಶ್ನೆಗೆಸಾಕ್ಷಿ ಅದನ್ನು ನೋಡಿ, ಚತುರ್ಗಡಿ ಬರೆದಿರುವುದಿಲ್ಲ ಎಂದು ನುಡಿಯುತ್ತಾರೆ. ಆದರೆ ಅದೇ ದಾಖಲೆಯಲ್ಲಿ ನಕ್ಷೆಯಲ್ಲಿ ತೋರಿಸಿದಂತೆ ಬರೆಯಲಾಗಿದೆ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ನ್ಯಾಯಾಲಯದ ಊಟದ ವಿರಾಮದ ಸವಯವಾದ್ದರಿಂದ ಪ್ರಕರಣವನ್ನು ಮುಂದೂಡಲಾಯಿತು.)

(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

**ಓ ಹೇ ಕೇ ಸರಿ ಇದೆ.**

*Sd/-*

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**

**ಡಿ.ಡಬ್ಲುಃ 2**

**ಊಟದ ವಿರಾಮದ ನಂತರ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ 25-10-2024.**

**ಮುಂದುವರಿದ ಪಾಟೀಸವಾಲುಃ ವಾದಿಗಳ ಪರ ಶ್ರೀ ಕೆ.ಆರ್.ಎನ್. ವಕೀಲರಿಂದಃ-**

ದಾನಪತ್ರ ನಿಡಿ-4 ರ 2ನೇ ಪುಟದ 3ನೇ ಪ್ಯಾರಾದಲ್ಲಿ ಬರೆದ ಎಲ್ಲಾ ವಿಚಾರಗಳು ಸರಿಯಾಗಿರುತ್ತದೆ ಎಂದರೆ ಸರಿ. ಅದನ್ನು ನನ್ನ ಅಜ್ಜ ಮಾಹಿತಿ ನೀಡಿ ಬರೆಸಿದ್ದಾರೆ ಎಂದರೆ ಸರಿ. ನಮ್ಮ ಅಜ್ಜನಿಂದ ಬಂದ ಆಸ್ತಿಯಲ್ಲಿ ಯಾವುದೇ ಪಾಲುಪಟ್ಟಿಯಾಗಿರಲಿಲ್ಲ. ನಮ್ಮ ಅಜ್ಜ ಮತ್ತು ಅವರ ತಮ್ಮನ ಕುಟುಂಬದವರ ನಡುವೆ ಆಸ್ತಿಗಳು ಪಾಲು ಆಗಿರುವ ಬಗ್ಗೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿ. ದಾವಾಸ್ತಿಗಳನ್ನು ಹೊರತುಪಡಿಸಿ, ನಮ್ಮ ಕುಟುಂಬಕ್ಕೆ ಇನ್ನೂ ಬೇರೆ ಯಾವುದೇ ಆಸ್ತಿಗಳು ಇರುವುದಿಲ್ಲ. ನನ್ನ ತಂದೆ ಆಸ್ತಿಗಳನ್ನು ಖರೀದಿಸಿರುತ್ತಾರೆ. ನನ್ನ ತಂದೆ ಕಾಯ್ಕಿಣಿ ಗ್ರಾಮದಲ್ಲಿ 11 ಗುಂಟೆ ಜಾಗವನ್ನು ಖರೀದಿ ಮಾಡಿರುತ್ತಾರೆ, ಆದರೆ ಅದರ ಸರ್ವೆ ನಂಬರು ನನಗೆ ಗೊತ್ತಿಲ್ಲ. ನಮ್ಮ ತಂದೆ ಖರೀದಿ ಮಾಡಿದ್ದಾರೆ ಎಂದು ಹೇಳಿದ ಕ್ರಯ ಪತ್ರ ಮತ್ತು ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನನ್ನ ಅಜ್ಜ ಮತ್ತು ಅವರ ಸಹೋದರ ಯಾವುದೇ ಜಮೀನುಗಳನ್ನು ಖರೀದಿಸಿರುವುದಿಲ್ಲ. ಸದರಿಯವರು ಜಮೀನು ಖರೀದಿ ಮಾಡಿದ್ದಾರೆ ಎಂದು ತೋರಿಸಲು ಯಾವುದೇ ದಾಖಲೆಗಳು ಇರುವುದಿಲ್ಲ.

ದಾನಪತ್ರವನ್ನು ವಕೀಲರು ಬರೆದಿರುತ್ತಾರೆ. ದಾನಪತ್ರಕ್ಕೆ ಸಹಿ ಮಾಡಿದ ಎಲ್ಲರೂ ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ಸದರಿ ದಾವಾಸ್ತಿ ಒಟ್ಟು ಕುಟುಂಬದ ಆಸ್ತಿಯಿದ್ದು, ನಾನು ಮತ್ತು ನನ್ನ ತಂದೆ ಸೇರಿಕೊಂಡು ಮೋಸದಿಂದ ನನ್ನ ಅಜ್ಜನಿಂದ ಬರೆಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವಾದಿಯರಿಗೆ ದಾವಾಸ್ತಿಯಲ್ಲಿ ಪಾಲು ಕೊಡಬಾರದು ಎಂಬ ಉದ್ದೇಶದಿಂದ ನಿಡಿ-4 ರಂತೆ ಸುಳ್ಳು ದಾನಪತ್ರ ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿಯರಿಗೆ ಮೋಸಮಾಡುವ ಉದ್ದೇಶದಿಂದ ದಾವಾಸ್ತಿಯನ್ನು ಬ್ಯಾಂಕಿನಲ್ಲಿ ಅಡಮಾನ ಮಾಡಿ ಸಾಲ ಪಡೆದು, ಈ ದಿನದವರೆಗೂ ಸಾಲವನ್ನು ಉದ್ದೇಶಪೂರ್ವಕವಾಗಿ ತುಂಬಿಲ್ಲ ಎಂದರೆ ಸರಿಯಲ್ಲ. ಸದರಿ ಸಾಲಕ್ಕೆ ನನ್ನ ತಂದೆ, ರಾಮಕೃಷ್ಣ ನಾಯ್ಕ ಮತ್ತು ರಾಘವೇಂದ್ರ ನಾಯ್ಕ ರವರು ಜಾಮೀನುದಾರರಿರುತ್ತಾರೆ, ರಾಘವೇಂದ್ರ ನಾಯ್ಕ ಮತ್ತು ರಾಮಕೃಷ್ಣ ನಾಯ್ಕ ರವರು ನನ್ನ ದೊಡ್ಡಮ್ಮನ ಮಕ್ಕಳಾಗಬೇಕು. ದಾನಪತ್ರ ಕಾನೂನುಬದ್ಧವಾಗಿರುವುದಿಲ್ಲ. ಸದರಿ ದಾವಾಸ್ತಿ

ಪಿತ್ರಾರ್ಜಿತ ಆಸ್ತಿಯಾಗಿದ್ದರಿಂದ ವಾದಿಯರಿಗೂ ಸಹ ಅದರಲ್ಲಿ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ದಾನಪತ್ರವನ್ನು ವಾದಿಯರ ತಿಳುವಳಿಕೆಗೆ ಇಲ್ಲದೇ ಮಾಡಿರುವುದರಿಂದ ಅದು ಅವರ ಪಾಲಿಗೆ ಬಂಧನಕಾರಕವಾಗುವುದಿಲ್ಲ ಎಂದರೆ ಸರಿಯಲ್ಲ. ದಾನಪತ್ರದ ಮೇಲೆ ನಮಗೆ ಯಾವುದೇ ಹಕ್ಕು ಪ್ರಾಪ್ತವಾಗುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.680 ರಲ್ಲಿ 12 ನೇ ಪ್ರತಿವಾದಿ ಖರೀದಿ ಮಾಡಿದ ನಂತರ ಹಿಸ್ಸೆಗಳು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಹಕ್ಕು ಬಿಡುಗಡೆ ಪತ್ರಕ್ಕೆ ವಾದಿಯರು ಸಹಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಪ್ರಮಾಣ ಪತ್ರಕ್ಕೆ ವಕೀಲರಿಗೆ ಮಾಹಿತಿ ನಾನೇ ನೀಡಿರುತ್ತೇನೆ. ದಾವಾಸ್ತಿಗಳು ಒಟ್ಟು ಕುಟುಬಂದ ಆಸ್ತಿಯಾಗಿದ್ದು, ಅವುಗಳಲ್ಲಿ ಈ ದಿನದ ವರೆಗೂ ವಿಭಾಗವಾಗಿಲ್ಲ, ಅದರಿಂದ ವಾದಿಯರಿಗೆ ಕಾನೂನು ಬದ್ಧವಾದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**